ಶ್ರೀ ಆರ್. ಎನ್. ಲಕ್ಷ್ಮೀಪತಿ.—ನೆನ್ನೆದಿವಸ ತಾವು ಕೆಲವು ಅಕ್ವಿಜಿಷನ್ ಕೆಲಸಗಳು 1956ನೇ ಇಸವಿಯಿಂದಲೂ ಆಗಿಲ್ಲ ಎಂದು ಹೇಳಿದಿರಿ, ಈ ರೀತಿ ಲ್ಯಾಂಡ್ ಅಕ್ವಿಜಿಷನ್ ಆಗದೆ ಇರುವುದರಿಂದ ಕೆಲವು ಕಾಲುವೆಗಳು ಮತ್ತು ಕೆರೆಗಳ ಕೆಲಸ ಅರ್ಧಕ್ಕೇ ನಿಂತು ಹೋಗಿ ಲಕ್ಷಾಂತರ ರೂಪಾಯಿಗಳು ನಷ್ಟವಾಗುತ್ತಿದೆ. ಆದ್ದರಿಂದ ಒಂದು ವರ್ಷದ ಅವಧಿಯಲ್ಲಾದರೂ ಲ್ಯಾಂಡ್ ಅಕ್ವೈರ್‌ಮಾಡಿಕೊಳ್ಳುವುದಕ್ಕೆ ಅವಕಾಶವಾಗುವಂತೆ ಕಾಯಿದೆಯಲ್ಲಿ ಒಂದು ತಿದ್ದುಪಡಿಯನ್ನು ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ನಾನು ನಿನ್ನೆದಿವಸ ಹೇಳಿದ ಅಕ್ವಿಜಿಷನ್ ವಿಷಯ ಬೇರೆ. ಆ ಪ್ರಶ್ನೆಗೆ ಸಂಬಂಧಪಟ್ಟ ಮನುಷ್ಯ ನುಮಾರು 10 ವರ್ಷಗಳಿಂದಲೂ ಕಾಂಪೆನ್‌ಸೇಷನ್ ಕೇಳಿರಲಿಲ್ಲ. ಈಗ ಅವರು ಕಾಂಪೆನ್‌ಸೇಷನ್ ಕೇಳುತ್ತಿದ್ದಾರೆ. ಆ ಜಮೀನಿಗೆ ಸಂಬಂಧಪಟ್ಟ ರೆಕಾರ್ಡು ಪೋಲೀಸ್ ಆಕ್ಷನ್‌ನಲ್ಲಿ ಕಳೆದುಹೋಗಿತ್ತು. ಈಗ ಹೊಸ ರೆಕಾರ್ಡನ್ನು ಬಿಲ್ಡ್ ಅಪ್ ಮಾಡಿ ಅವರಿಗೆ ಕಾಂಪೆನ್‌ಸೇಷನ್ ಕೊಡಬೇಕಾಗಿದೆ. ಆ ಮೇರೆ ಅಕ್ವೈರ್ ಮಾಡಿಕೊಂಡು ಜಮೀನುಗಳಿಗೆ ಕಾಂಪೆನ್‌ಸೇಷನ್ ಕೊಡುವ ವಿಷಯದಲ್ಲಿ ಸಾಧ್ಯವಾದಷ್ಟು ಬೇಗ ಕಾಂಪೆನ್‌ಸೇಷನ್ ಕೊಡ ಬೇಕೆಂಬುದೇ ಸರ್ಕಾರದ ಉದ್ದೇಶ. ಆದರೆ ಅಕ್ವಿಜಿಷನ್ ಕೆಲಸ ಲ್ಯಾಂಡ್ ಅಕ್ವಿಜಿಷನ್ ಆಕ್ಟ್ ಪ್ರಕಾರ ನಡೆಯಬೇಕಾಗಿರುವುದರಿಂದ ಮಧ್ಯೆ ಕೆಲವು ತೊಂದರೆ ಬಂದು ಅದು ಸ್ವಲ್ಪ ನಿಧಾನವಾಗುತ್ತಿದೆ.

ಶ್ರೀ ಜೆ. ದೇವಯ್ಯ.—ಈಗ ಸರ್ಕಾರದವರು ಯಾವುದಾದರೂ ಒಂದು ಜಮೀನನ್ನು ಅಕ್ವೈರ್ ಮಾಡಿಕೊಂಡರೆ ಆ ಜಮೀನಿಗೆ ಬದಲು ಬೇರೆ ಜಮೀನನ್ನು ಕೊಡುತ್ತೀರಾ ? ಆ ರೀತಿ ಯಾರಿಗಾದರೂ ಕೊಟ್ಟಿದ್ದೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅನೇಕ ಸಂದರ್ಭಗಳಲ್ಲಿ ಸ್ಥಳೀಯ ಅಧಿಕಾರಿಗಳು ಜಮೀನು ಕೊಡುತ್ತಾರೆ. ಆದರೆ ಅನೇಕ ಸಂದರ್ಭಗಳಲ್ಲಿ ಕೊಡುವುದಕ್ಕಾಗುವುದಿಲ್ಲ. ಅಂಥಾ ಸಂದರ್ಭಗಳಲ್ಲಿ ಕಾಂಪೆನ್‌ಸೇಷನ್ ಕೊಡುತ್ತೇವೆ.

ಶ್ರೀ ಜೆ. ದೇವಯ್ಯ.—ಭೂಮಿಯನ್ನೇ ನಂಬಿಕೊಂಡು ಜೀವನ ಮಾಡತಕ್ಕವರ ಜಮೀನನ್ನು ಸರ್ಕಾರದವರು ಅಕ್ವೈರ್ ಮಾಡಿಕೊಂಡ ಮೇಲೆ ಅವರಿಗೆ ಜಮೀನು ಕೊಡುವುದು ಒಳ್ಳೆಯದು. ಆದ್ದರಿಂದ ಅವರಿಗೆ ಜಮೀನು ಕೊಡುವುದಕ್ಕೆ ಅವಕಾಶವಿಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅವರಿಗೆ ಭೂಮಿಯನ್ನು ಕೊಡಬೇಕಾದದ್ದು ಸರ್ಕಾರದ ಆದ್ಯ ಕರ್ತವ್ಯ. ಅದು ಸ್ಥಳೀಯ ಅಧಿಕಾರಿಗಳ ಮೇಲೆ ಹೋಗುತ್ತದೆ. ಈ ಸ್ಥಳದಲ್ಲಿ ಭೂಮಿ ಇದ್ದರೆ ಅದನ್ನು ಅವರಿಗೆ ಕೊಡುವುದು ಸರ್ಕಾರದ ಧರ್ಮ. ಅಲ್ಲಿ ಭೂಮಿ ಇಲ್ಲದಿದ್ದರೆ ಹಣ ಕೊಡುತ್ತಾರೆ.

Co-operative Spinning Mill in Raichur.

*Q.—81. Sri VEERABHADRAPPA ERAPPA (Yelburga).—

Will the Government be pleased to state :—

(*a*) whether shares have been collected from the public for establishing a Co-operative Spinning Mill in Raichur District;

(*b*) if so, the amount that has been collected so far;

(*c*) the amount spent by the Management so far towards starting the Co-operative Spinning Mill;

(*d*) the initial capital required for this Mill;

(*e*) out of this amount, how much amount has to be contributed by the Co-operative Society ?

A.—Sri S. NIJALINGAPPA (Chief Minister) [on behalf of Sri K. MALLAPPA (Minister for Industries and Commerce)].—

(*a*) Yes.

(*b*) Rs. 7,41,000

(c) Rs. 84,329

(d) Capital outlay is estimated as follows :—

(i) Land and Buildings	...	Rs. 15 lakhs.
(ii) Machinery	...	Rs. 55 lakhs.
Total	...	Rs. 70 lakhs.

(e) Rs. 10·00 lakhs.

ಶ್ರೀ ವೀರಭದ್ರಪ್ಪ ಈರಪ್ಪ.—ರಾಯಚೂರು ಡಿಲ್ಲೆಯ ನೂಲನ ಗಿರಣಿಯ ಸಹಕಾರ ಸಂಘದವರು ಕೊಡಬೇಕಾಗಿರುವ 10 ಲಕ್ಷ ರೂಪಾಯಿ ಷೇರ್ ಮೊಬಲಗನ್ನು ಪೂರ್ತಿಯಾಗಿ ಕೊಟ್ಟಿದ್ದಾರೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಹೌದು, ಕೊಟ್ಟಿದ್ದಾರೆ.

ಶ್ರೀ ವೀರಭದ್ರಪ್ಪ ಈರಪ್ಪ.—ಆ ಷೇರು ಮೊಬಲಗು ಸಂಗ್ರಹವಾಗಿ ಎಷ್ಟು ವರ್ಷ ಆಯಿತು ?

ಶ್ರೀ ಎಸ್ ನಿಜಲಿಂಗಪ್ಪ.—ಅದು ಇತ್ತೀಚೆಗೆ ಆಯಿತು.

ಶ್ರೀ ವೀರಭದ್ರಪ್ಪ ಈರಪ್ಪ.—ಈಗ ಆ ಸಹಕಾರ ಸಂಘದವರು ಕೊಡಬೇಕಾಗಿದ್ದ 10 ಲಕ್ಷ ರೂಪಾಯಿಗಳನ್ನು ಅವರು ಕೊಟ್ಟಿದ್ದಾರೆ. ಆದ್ದರಿಂದ ಇನ್ನು ಸರ್ಕಾರದ ಕಡೆಯಿಂದ ಅದಕ್ಕೆ ಕೊಡಬೇಕಾಗಿರತಕ್ಕ ಹಣವನ್ನು ಯಾವಾಗ ಜಮಾ ಮಾಡಿಸುತ್ತೀರಿ ?

ಶ್ರೀ ಎಸ್. ನಿಜಲಿಂಗಪ್ಪ.—ಹಣಕಾಸಿನ ಇರಾಖೆಯವರು ಅದನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತಾರೆ.

Sri C. J. MUCKANNAPPA.—May I know the capacity of the mill ?

Sri S. NIJALINGAPPA.—It is now 12,500 spindles and it is likely to be raised to 25,000.

ಶ್ರೀ ಆರ್. ಎಸ್. ಪಾಟೀರ್.—ಆ ಸಹಕಾರಿ ನೂಲನ ಗಿರಣಿಯ ಆಡಳಿತ ವರ್ಗದವರು 84,329 ರೂಪಾಯಿಗಳನ್ನು ಖರ್ಚು ಮಾಡಿದ್ದಾರೆಂದು ಹೇಳಿದ್ದೀರಿ, ಅದನ್ನು ಯಾವ ಯಾವ ದಾಖಲುಗಳಿಗೆ ಖರ್ಚು ಮಾಡರಾಗಿದೆ, ಮತ್ತು ಆ ಅಂಕಿ ಅಂಶಗಳು ಎಷ್ಟು ವರ್ಷದ್ದು ?

ಶ್ರೀ ಎಸ್. ನಿಜಲಿಂಗಪ್ಪ.—ಆ ಅಂಕಿ ಅಂಶಗಳು ಎರಡು ವರ್ಷಗಳಲ್ಲ ಆಗಿರುವಂಥಾದ್ದು. ಆ ಸಹಕಾರಿ ನೂಲನ ಗಿರಣಿಯನ್ನು ಪ್ರಾರಂಭಿಸುವ ನಂಬಂಧದಲ್ಲ ಅದನ್ನು ಆರ್ಗನೈಜ್ ಮಾಡುವುದಕ್ಕಾಗಿ ಅವರು ಆ ಹಣವನ್ನು ಖರ್ಚು ಮಾಡಿದ್ದಾರೆ.

Mr. SPEAKER.—If the break up is available, that may be given.

Sri S. NIJALINGAPPA.—The break-up is as follows :—

	Rs.
Establishment	22,669
Jeep and Petrol expenditure	6,140
Postage, stationery, etc.	3,150
T. A., D. A. to the Directorate	16,000
Import licence	1,965
Telephone bill	1,970
Jeep insurance	975
Purchase of jeep	14,100
Furniture	800
Typewriter	7,500
Purchase of site	13,800

Sri C. J. MUCKANNAPPA.—When will this mill go into production?

Sri S. NIJALINGAPPA.—It is difficult to say. They have placed orders for the import of machinery. It is likely that within 1½ years they will go into production.